ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರು ಮಾಡಬೇಕಾಗಿದ್ದು ಈಗಾಗಲೇ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಸದರಿ ತಾಲ್ಲೂಕಿಗೆ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶ ಇರುವುದಿಲ್ಲ.

ಅಲ್ಪಸಂಖ್ಯಾತರ ನಿರುದ್ಯೋಗಿ ಯುವಕರಿಗೆ ಕಾರ್ಯಕ್ರಮಗಳು

873 (1475) ಶ್ರೀ ಖಾದರ್ ಯು.ಟಿ. (ಮಂಗಳೂರು) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ನಿರುದ್ಯೋಗಿ ಯುವ ಜನತೆಗೆ ಸರ್ಕಾರ ಯಾವ ಯಾವ ಕಾರ್ಯಕ್ರಮದಡಿಯಲ್ಲಿ ಉದ್ಯೋಗಾವಕಾಶ ಕಲ್ಪಿಸಿ ಕೊಡಲಾಗುವುದೇ (ವಿವರ ನೀಡುವುದು);

ಆ) ಈ ಕಾರ್ಯಕ್ರಮಗಳಿಗೆ ಪ್ರಸ್ತುತ ವರ್ಷ ಎಷ್ಟು ಹಣವನ್ನು ಮೀಸಲಿರಿಸಲಾಗಿದೆ;

ಇ) ದಕ್ಷಿಣ ಕನ್ನಡ ಜಿಲ್ಲೆಗೆ ಈ ಸಾಲಿನಲ್ಲಿ ಮೀಸಲಿಟ್ಟ ಹಣ ಎಷ್ಟು?

ಶ್ರೀ ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ರಾಜ್ಯದ ಅಲ್ಪಸಂಖ್ಯಾತರ ನಿರುದ್ಯೋಗಿ ಯುವಕರುಗಳಿಗೆ ಸ್ವಯಂ ಉದ್ಯೋಗಿ ಯಾಗಲು ಸ್ವಾವಲಂಬನ ಸಾಲದ ಯೋಜನೆಯಡಿಯಲ್ಲಿ ಹಾಗೂ ಶ್ರಮಶಕ್ತಿ ಸಾಲದ ಯೋಜನೆಯಡಿಯಲ್ಲಿ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಅಲ್ಪಸಂಖ್ಯಾತರ ನಿರುದ್ಯೋಗ ಯುವ ಜನತೆಗೆ ವಿವಿಧ ಯೋಜನೆಯಡಿ ತರಬೇತಿಗಳನ್ನು ನೀಡಿ ಉದ್ಯೋಗವಕಾಶ ಕಲ್ಪಿಸಿಕೊಡಲಾಗುತ್ತಿದೆ. ಇವುಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ಸ್ವಾವಲಂಬನ ಸಾಲದ ಯೋಜನೆಗೆ ರೂ.400.00 ಲಕ್ಷಗಳನ್ನು ಹಾಗೂ ಶ್ರಮಶಕ್ತಿ ಯೋಜನೆಗೆ ರೂ.720.00 ಲಕ್ಷಗಳನ್ನು ಮೀಸಲಿರಿ ಸಲಾಗಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ 2009–10ನೇ ಸಾಲಿನಲ್ಲಿ ರೂ. 559.87 ಲಕ್ಷ ಹಣವನ್ನು ಮೀಸಲಿರಿಸಲಾಗಿದೆ.

ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸ್ವಾವಂಲಂಬನ ಸಾಲದ ಯೋಜನೆಗೆ ರೂ.52.50 ಲಕ್ಷ ಹಾಗೂ ಶ್ರಮಶಕ್ತಿ ಯೋಜನೆಗೆಂದು ರೂ.52.50 ಲಕ್ಷಗಳನ್ನು ಮೀಸಲಿಡಲಾಗಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ದಕ್ಷಿಣ ಕನ್ನಡ ಜಿಲ್ಲೆಗೆ 2009–10ನೇ ಸಾಲಿಗೆ ರೂ. 45.20 ಲಕ್ಷಗಳನ್ನು ಮೀಸಲಿಟ್ಟು ಬಿಡುಗಡೆ ಮಾಡಲಾಗಿದೆ.

ಶ್ರೀ ಖಾದರ್ ಯು.ಟಿ. (ಮಂಗಳೂರು) ವಿಧಾನ ಸಭೆಯ ಸದಸ್ಯರ ರವರ ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ: 1475 ಕ್ಕೆ ಉತ್ತರಗಳು ಅನುಬಂಧ–1

1	ಡೆಸ್ಕ್ ಟಾಪ್ ಪಬ್ಲಿಕೇಷನ್
2	ಪಿ.ಸಿ. ಅಸೆಂಬ್ಲಿ
3	ಕಂಪ್ಯೂಟರ್ ಪ್ರೋಗ್ರಾಮರ್
4	ಆಫೀಸ್ ಅಟೋಮೇಷನ್
5	ಆಟೋ ಕ್ಯಾಡ್
6	ಡಿಪ್ಲೋಮ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್
7	ಅಕೌಂಟ್ ಡಿಪ್ಲೋಮಾ ಇನ್ ಸಾಫ್ಟ್ ವೇರ್ ಟೆಕ್ನಾಲಜಿ
8	ಡಿಪ್ಲೋಮ ಇನ್. ಪಿ.ಸಿ. ಹಾರ್ಡ್‌ವೇರ್ ಮತ್ತು ನೆಟ್ ವರ್ಕಿಂಗ್
9	Post Graduate Diploma in Banking and Financial Service
10	Infrastructure Management Service (IMS)
11	Soft Skills for Employability
12	Sales persons/Retail
13	Hospitality Assistant
14	Information & Communication Technology
15	Assistant waiter/Barmen
16	Garments making

17	ಕಾನೂನು ಪದವೀಧರರಿಗೆ ತರಬೇತಿ ಭತ್ಯೆ ನೀಡಿಕೆ
18	ಅಲ್ಪಸಂಖ್ಯಾತರಿಗಾಗಿ ಶಿಷ್ಯವೇತನ:ಐಟಿಐ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಸ್ಟೈಫಂಡ್
19	ವೃತ್ತಿಪರ ಕೋರ್ಸ್‌ಗಳಾದ ಸರ್ವಿಸಿಂಗ್ ಇನ್ ಎಲೆಕ್ಟ್ರಾನಿಕ್ ಎಕ್ವಿಪ್‌ಮೆಂಟ್, ಎಲೆಕ್ಟ್ರಿಕಲ್ ವೈಯರ್ ಮನ್ ಟ್ರೈನಿಂಗ್ ಫಾರ್ ವೈಯರಿಂಗ್ ಲೈಸೆನ್ಸ್, ಏರ್‌ಕಂಡಿಶನಿಂಗ್ ಇನ್ ರಿಫ್ರಿಜಿರೇಷನ್, ಸೂಪರ್‌ವೈಜರ್ ಇನ್ ಸಿವಿಲ್ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್, ರಿಪೇರಿಂಗ್ ಆಫ್ ಡೊಮೆಸ್ಟಿಕ್ ಎಲೆಕ್ಟ್ರಿಕಲ್ ಅಪ್ಲೈಯನ್ಸಸ್.
20	ನರ್ಸಿಂಗ್ ತರಬೇತಿ ಯೋಜನೆಯಡಿ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಾದ ಬಿಎಸ್ಸ್.ಸಿ. ನರ್ಸಿಂಗ್ ಮತ್ತು ಜಿ.ಎನ್.ಎಂ. ನರ್ಸಿಂಗ್ ಕೋರ್ಸ್.

ಸಮಾಜ ಕಲ್ಯಾಣ ಇಲಾಖೆ ಬಿಡುಗಡೆ ಮಾಡಿರುವ ಅನುದಾನ

874 (1476) ಶ್ರೀ ಖಾದರ್.ಯು.ಟಿ (ಮಂಗಳೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಿಂದ ಈ ವರ್ಷ ಬಿಡುಗಡೆ ಮಾಡಿರುವ ಹಣ ಎಷ್ಟು? ಯಾವ ಯಾವ ಕಾರ್ಯಕ್ರಮಗಳಿಗೆ ಈ ಹಣವನ್ನು ಬಿಡುಗಡೆಗೊಳಿಸಲಾಗಿದೆ;

ಆ) ಜಿಲ್ಲಾವಾರು ಮಾಹಿತಿ ನೀಡುವುದು;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು ಕ್ಷೇತ್ರವಾರು ವಿವರ ಒದಗಿಸುವುದು?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಆ) ಮತ್ತು ಇ) ಆ ಸಂಬಂಧದ ವಿವರಗಳನ್ನು ಅನುಬಂಧ 1,2 ಮತ್ತು 3 ರಲ್ಲಿ ನೀಡಲಾಗಿದೆ.